ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಇಂಧನ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

899(1542) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ಬಂದ ಮೇಲೆ ಆದಾಯ ಜಾಸ್ತಿ ಆಗಿದೆಯೇ :

ಆ) ಹಾಗಿದ್ದಲ್ಲಿ, ಜಾಸ್ತಿ ಆದಾಯ ಎಷ್ಟು (ಪಟ್ಟಣ ವ್ಯಾಪ್ತಿಯಲ್ಲಿರುವ ಸ್ಥಳೀಯ ಸಂಸ್ಥೆಗಳ ವಿವರ ನೀಡುವುದು);

ಇ) ಅಕ್ಟಾಯ್ ಸುಂಕ ರದ್ದಾದನಂತರ ಇದಕ್ಕೆ ಪರ್ಯಾಯವಾಗಿ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದ್ದ ಅನುದಾನವನ್ನು ಈಗ ನೀಡಲಾಗುತ್ತಿದೆಯೇ; ನೀಡಲಾಗುತ್ತಿದ್ದರೆ, ಇದರ ಮೊತ್ತ ಎಷ್ಟು ;

ಈ) ಅಕ್ಟಾಯ್ ರದ್ದಾದ ನಂತರ ಇದಕ್ಕೆ ಪರ್ಯಾಯವಾಗಿ ಮಾರಾಟ ತೆರಿಗೆಯ ಮೇಲೆ ಸರ್‌ಚಾರ್ಜ್ ವಿಧಿಸಿ ಆ ಮೂಲಕ ವಸೂಲು ಮಾಡುತ್ತಿರುವ ಮೊತ್ತ ಎಷ್ಟು ; ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿರುವ ಪಾಲು ಎಷ್ಟು ;

ಉ) ಒಂದು ವೇಳೆ ಪರ್ಯಾಯ ಅನುದಾನ ನೀಡುತ್ತಿಲ್ಲವಾದಲ್ಲಿ ಈ ಹಣವನ್ನು ಯಾವ ಬಾಬ್ತಿಗೆ ವಿನಿಯೋಗಿರಸಲಾಗುತ್ತಿದೆ ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ಹೌದು

ಆ) ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇ.50 ರಿಂದ 100 ರಷ್ಟು ಆದಾಯ ಹೆಚ್ಚುವರಿಯಾಗಿದೆ.

ಇ) ಹೌದು, 2004–05ರಲ್ಲಿ ರೂ. 797.06 ಕೋಟಿಗಳಷ್ಟು .

ಈ) ಮಾರಾಟ ತೆರಿಗೆ ಮೇಲೆ ಅಕ್ಟಾಯ್ ಪರ್ಯಾಯವಾಗಿ ಸರ್ ಚಾರ್ಜ್ ವಿಧಿಸುವ ವಿಷಯ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಸರ್ಕಾರವು ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಒಟ್ಟಾರೆ ರಾಜ್ಯದ, ಆದಾಯದಲ್ಲಿ (NLGOR) ಶೇಕಡ 5.4 ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

900(1477) ಶ್ರೀ ಅಶೋಕ ಗುರಪ್ಪ ಶಾಬಾದಿ(ಸಿಂಧಗಿ) : ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧಗಿ ತಾಲ್ಲೂಕಿನ ಚಿಮ್ಮಲಗಿ ಏತ ನೀರಾವರಿ ಯೋಜನೆಗೆ ಸರ್ಕಾರ ಮೀಸಲಿಟ್ಟ ಅನುದಾನವೆಷ್ಟು :

ಆ) ಸದರಿ ಯೋಜನೆಯು ಈಗ ಯಾವ ಹಂತದಲ್ಲಿದೆ :

ಇ) ಸಿಂಧಗಿ ತಾಲ್ಲೂಕಿನ ಎಷ್ಟು ಹೆಕ್ಟೇರ್ ಪ್ರದೇಶವನ್ನು ಈ ಯೋಜನೆಯ ವ್ಯಾಪ್ತಿಗೊಳಪಡಿಸಲಾಗಿದೆ (ಗ್ರಾಮವಾರು ವಿವರ ನೀಡುವುದು) :

ಈ) ಸದರಿ ಯೋಜನೆಯ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಚಿಮ್ಮಲಗಿ ಏತ ನೀರಾವರಿ ಯೋಜನೆಯು ಸ್ಕೀಂ-'ಬಿ' ಅಡಿಯಲ್ಲಿ ಪ್ರಸ್ತಾವನೆ ಇದ್ದು, ಸಧ್ಯ ಈ ಯೋಜನೆಯ ಕಾಮಗಾರಿಗಳಿಗೆ ಯಾವುದೇ ಅನುದಾನ ಮೀಸಲಾಗಿಟ್ಟಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮೇಲಿನಂತೆ.

901(1478) ಶ್ರೀ ಅಶೋಕ ಗುರಪ್ಪ ಶಾಬಾದಿ(ಸಿಂಧಗಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಡಿ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಪೂರೈಸಲು ಸರ್ಕಾರವು ನಿಗಧಿಗೊಳಿಸಿರುವ ಕಾಲಮಿತಿಯೇನು :

ಆ) ಈ ಕಾಮಗಾರಿಯು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಸದರಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟ ರೈತರಿಗೆ ನೀರು ಒದಗಿಸಲು ಯೋಜನೆ ರೂಪಿಸುವುದು ಯಾವಾಗ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಸದರಿ ಯೋಜನೆಯನ್ನು ಮಾರ್ಚ್ 2006 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ಯೋಜನೆಯ ಜಾಕ್‌ವೆಲ್, ಮುಖ್ಯ ಕಾಲುವೆ, ವಿತರಣಾ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ವಿತರಣಾ ಕಾಲುವೆ ಜಾಲದ ಉಳಿದ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆಗಳು ತಯಾರಿಸಲಾಗಿದ್ದು, ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸದರಿ ಯೋಜನೆ ವ್ಯಾಪ್ತಿಗೆ ಬರುವ 41,900 ಹೆ. ಪ್ರದೇಶಕ್ಕೆ ಮಾರ್ಚ್ 2006 ರೊಳಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

903(172) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಸುತ್ತಮುತ್ತಲಿನ ಏಳು ನಗರಸಭೆಯ ವ್ಯಾಪ್ತಿಯ ಕಾವೇರಿ ನೀರಿನ ಸರಬರಾಜು ಕಾಮಗಾರಿಗಳ ಸಂದರ್ಭದಲ್ಲಿ ಟೆಂಡರ್ ಕರೆದಿರುವುದು ನಿಜವೆ .

ಆ) ಹಾಗಿದ್ದಲಿ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು ?

ಇ) ಈ ಯೋಜನೆಗೆ ತಗಲುವ ವೆಚ್ಚ ಎಷ್ಟು ?

ಈ) ಯಾವಾಗ ಈ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು ?